# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 216 |
| ಸದಸ್ಯರ ಹೆಸರು | ಶ್ರೀ ಕಾಂತರಾಜ್ (ಬಿಎಂಎಲ್)<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 14.12.2021 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ (DMFT) ಗಳು ಅಸ್ತಿತ್ವದಲ್ಲಿ ಇವೆಯೇ: ಹಾಗಿದ್ದಲ್ಲಿ ಅವು ಯಾವುವು: ಇದರ ಸ್ಥಾಪನೆಯ ಉದ್ದೇಶಗಳೇನು; (ವಿವರವಾದ ಮಾಹಿತಿ ನೀಡುವುದು) | ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ತಿದ್ದುಪಡಿ ಕಾಯ್ದೆ, 2015 ರ ಕಲಂ 9(ಬಿ) ರಂತೆ ಎಲ್ಲಾ ರಾಜ್ಯಗಳು ಜಿಲ್ಲಾ ಖನಿಜ ಪ್ರತಿಷ್ಠಾನ ಎಂಬ ಲಾಭರಹಿತ ಟ್ರಸ್ಟ್ ಸ್ಥಾಪಿಸಲು ಸೂಚಿಸಿರುತ್ತದೆ.<br>ರಾಜ್ಯ ಸರ್ಕಾರವು ಪ್ರಧಾನ ಮಂತ್ರಿ ಖನಿಜ ಕ್ಷೇತ್ರ ಕಲ್ಯಾಣ ಯೋಜನಾ (PMKKKY) ಅಂಶಗಳನ್ನು ಅಳವಡಿಸಿಕೊಂಡು, ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ನಿಯಮಗಳು, 2016ನ್ನು ದಿನಾಂಕ 11.01.2016 ರಂದು ಜಾರಿಗೆ ತಂದಿದ್ದು, ನಂತರ ನಿಯಮಗಳಿಗೆ ದಿನಾಂಕ 25.07.2016, 08.03.2018 ಹಾಗೂ ದಿನಾಂಕ 06.05.2020 ರಂದು ತಿದ್ದುಪಡಿ ತರಲಾಗಿರುತ್ತದೆ.<br>ಅದರಂತೆ ರಾಜ್ಯದ 30 ಜಿಲ್ಲೆಗಳಲ್ಲಿ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ಸ್ಥಾಪಿಸಿದ್ದು, ಪ್ರಸ್ತುತ ಅಸ್ತಿತ್ವದಲ್ಲಿರುತ್ತವೆ. ಸದರಿ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ಗೆ ಸಂಗ್ರಹವಾಗುವ ಡಿಎಂಎಫ್ ನಿಧಿಯನ್ನು ಗಣಿ ಬಾಧಿತ ಪ್ರದೇಶಗಳ ಅಭಿವೃದ್ಧಿ ಹಾಗೂ ಜನರ ಕಲ್ಯಾಣಕ್ಕಾಗಿ ಬಳಸುವುದು ಟ್ರಸ್ಟ್ ನ ಮುಖ್ಯ ಉದ್ದೇಶವಾಗಿರುತ್ತದೆ. |
| ಆ) | ಸದರಿ ಟ್ರಸ್ಟ್ ಗಳ ಅಡಿ ಹಾಲಿ ಲಭ್ಯವಿರುವ ಅನುದಾನವೆಷ್ಟು: ಸದರಿ ಅನುದಾನವನ್ನು ಯಾವ ಮೂಲದಿಂದ ಶೇಖರಿಸಲಾಗಿದೆ (ಜಿಲ್ಲಾವಾರು ಮಾಹಿತಿ ನೀಡುವುದು) | ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ನಲ್ಲಿ 2015-16 ರಿಂದ ಅಕ್ಟೊಬರ್ 2021ರ ಅಂತ್ಯದವರೆಗೆ ರೂ. 2975.44 ಕೋಟಿಗಳು ಸಂಗ್ರಹವಾಗಿರುತ್ತದೆ.<br>ಡಿಎಂಎಫ್ ಮೊತ್ತವನ್ನು ಗಣಿ ಮತ್ತು ಖನಿಜ (ತಿದ್ದುಪಡಿ) ಕಾಯ್ದೆ, 2015 ದಿನಾಂಕ 12.01.2015 ಮತ್ತು ಕರ್ನಾಟಕ ಉಪ ಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016 ದಿನಾಂಕ 12.08.2016 ರನ್ವಯ ಕ್ರಮವಾಗಿ ಹರಾಜು ರಹಿತ ಮಂಜೂರು ಮಾಡಲಾದ ಗಣಿ / ಕಲ್ಲುಗಣಿ ಗುತ್ತಿಗೆದಾರಿಂದ |